ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 28-5-1970.

*ಎತ್ತರಕ್ಕೆ ಜಿಗಿಯಲು ಹಗುರರಾಗಿ* (हाई-जम्प देने के लिए हल्का बनो)

ಇದು ಯಾವ ಸಮರ್ಪಣೆಯಾಗಿದೆ? ಸಮರ್ಪಣಾ ಸಮಾರಂಭವಲ್ಲ ತಾನೆ? ಈ ಸಮಾರಂಭದ ಹೆಸರೇನು? ಇದಾಗಿದೆ ತಮ್ಮ ಜೀವನವನ್ನು ನಿರ್ಣಯ ಮಾಡುವ ಸಮಾರಂಭ. ನಿರ್ಣಯ ಮಾಡಿಲ್ಲ, ಆದರೆ ಮಾಡಬೇಕು. ಈಗ ಒಪ್ಪಂದ ಮಾಡಿಕೊಳ್ಳಬೇಕು ನಂತರ ನಿಶ್ಚಿತಾರ್ಥವಾಗುವುದು. ನಂತರ ಸಂಪೂರ್ಣರಾಗುವ ಸಮಾರಂಭ, ಈಗ ಇಲ್ಲಿ ಮೊದಲ ಹಂತಕ್ಕಾಗಿ ಬಂದಿರುವಿರಿ. ಈಗ ಒಪ್ಪಂದ ಮಾಡಿಕೊಳ್ಳಬೇಕಾಗಿದೆ. ಆದ್ದರಿಂದ ಎಲ್ಲರೂ ಬಂದಿರುವಿರಿ. ನಿರ್ಣಯವನ್ನು ಮಾಡಲು ಬಂದಿರುವಿರೋ ಅಥವಾ ಇಲ್ಲವೋ? ಬಾಪ್ ದಾದಾ ಸಹ ಎಲ್ಲರ ಸಾಹಸವನ್ನು ನೋಡುತ್ತಿದ್ದಾರೆ. ಈಗ ಯಾವುದೇ ಮಾತಿನ ಸಾಹಸವನ್ನಿಟ್ಟುಕೊಂಡರೆ ಅದರ ಜೊತೆಗೆ ಏನಾದರೂ ಮಾಡಬೇಕಾಗುತ್ತದೆ, ಅನೇಕ ಮಾತುಗಳನ್ನು ಎದುರಿಸಬೇಕಾಗುತ್ತದೆ. ಸಾಹಸವಿಟ್ಟುಕೊಂಡ ತಕ್ಷಣ ಮಾಯೆ ಎದುರಿಸಲು ಆರಂಭಿಸುವುದು. ಆದ್ದರಿಂದ ಎದುರಿಸಲು ಸಾಹಸವೂ ಮೊದಲಿಂದಲೇ ತಮ್ಮಲ್ಲಿರಬೇಕು. ಇವರೆಲ್ಲರೂ ಎದುರಿಸಲು ತಯಾರಾಗಿದ್ದಾರೆಯೇ? ಯಾವುದೇ ಪರೀಕ್ಷೆ ಯಾವುದೇ ರೂಪದಲ್ಲಿ ಬರಲಿ, ಪರೀಕ್ಷೆಯನ್ನು ಪಾಸ್ ಮಾಡಲು ಒಂದು ವೇಳೆ ಎತ್ತರಕ್ಕೆ ಜಿಗಿಯುವ ಅಭ್ಯಾಸವಿದ್ದರೆ ಯಾವುದೇ ಪರೀಕ್ಷೆಯನ್ನು ಪಾಸ್ ಮಾಡಬಲ್ಲಿರಿ. ಹಾಗಾದರೆ ಇದು ಹಯ್ ಜಂಪ್ ಮಾಡುವವರ ಗುಂಪಾಗಿದೆ. ಯಾರು ತಮ್ಮನ್ನು ತಾವು ಹಯ್ ಜಂಪ್ ಮಾಡುವವರು ಎಂದು ತಿಳಿದುಕೊಳ್ಳುತ್ತಾರೆಯೋ ಅವರು ಕೈ ಎತ್ತಿ. ಇವರೆಲ್ಲ ಸಾಹಸವಿಟ್ಟುಕೊಳ್ಳುವುದರಲ್ಲಿ ನಂಬರವನ್ ಆಗಿದ್ದಾರೆ. ಹಯ್ ಎಂದರೇನು, ಅದರ ಮೊದಲ ಲಕ್ಷಣಗಳೇನು ಎಂಬುದನ್ನು ಇವರಿಗೆ ಹೇಳಿ. ಅವರಿಗೆ ಒಳಗೂ, ಹೊರಗೂ ಹಗುರತೆಯ ಅನುಭವವಾಗುವುದು, ಒಂದಾಗಿದೆ ಒಳಗೆ ತಮ್ಮ ಸ್ಥಿತಿಯಲ್ಲಿ ಹಗುರತೆ, ಎರಡನೆಯದಾಗಿದೆ ಹೊರಗೆ ಹಗುರತೆ, ಹೊರಗಡೆ ಎಲ್ಲಾ ಸಂಬಂಧಗಳಲ್ಲಿಯೂ ಬರಬೇಕಾಗುತ್ತದೆ. ಪರಸ್ಪರರ ಸಂಬಂಧ-ಸಂಪರ್ಕದಲ್ಲಿ ಬರಬೇಕಾಗುವುದು, ಆಗ ಒಳಗೂ ಹಗುರತೆ, ಹೊರಗೂ ಹಗುರತೆ. ಹಗುರತೆ ಇದ್ದರೆ ಹಯ್ ಜಂಪ್ ಕೊಡಬಹುದು. ಎಲ್ಲಿಗೆ ಹೋದರೂ ಅವರೊಂದಿಗೆ ಬೆರೆಯುವಂತೆ ಈ ಗುಂಪು ಹಗುರರಾಗಬೇಕು. ಇಷ್ಟು ಸಾಹಸವಿದೆಯಾ? ಒಂದು ವೇಳೆ ಇಷ್ಟೆಲ್ಲಾ ಕುಮಾರಿಯರು ಸಮರ್ಪಣೆಯಾದರೆ ಏನಾಗುವುದು?

ಈ ಭಟ್ಟಿಯಲ್ಲಿ ಯಾರು ಹೇಗೇ ಇರಲಿ, ಎಲ್ಲಿಯೇ ಇರಲಿ ಯಾವುದೇ ಪರಿಸ್ಥಿತಿಯಲ್ಲಿರಲಿ ಅವರೆಲ್ಲರನ್ನು ಎದುರಿಸುವಂತಹ ರೀತಿಯಲ್ಲಿ ಹೋಗಬೇಕು. ಏಕೆಂದರೆ ಸಮಸ್ಯೆಗಳನ್ನು ಅಳಿಸುವವರಾಗಿ ಹೋಗಬೇಕೇ ಹೊರತು ತಾವೇ ಸಮಸ್ಯೆಯಾಗಿ ಹೋಗಬಾರದು. ಕೆಲವರು ಸಮಸ್ಯೆಗಳನ್ನು ಅಳಿಸುವವರಿರುತ್ತಾರೆ ಇನ್ನು ಕೆಲವರು ಸ್ವಯಂ ಸಮಸ್ಯೆಯಾಗಿರುತ್ತಾರೆ. ಆದ್ದರಿಂದ ತಾವು ಸಮಸ್ಯೆಯಾಗದೇ ಸಮಸ್ಯೆಗಳನ್ನು ಅಳಿಸುವವರಾಗಿ. ನಂತರ ಬಾಪ್ ದಾದಾ ಈ ಗುಂಪಿಗೆ ಯಾವ ಹೆಸರನ್ನು ಇಡುತ್ತಾರೆ? ಕೆಲಸ ಮಾಡುವ ಮೊದಲೇ ಹೆಸರನ್ನಿಡುತ್ತಾರೆ ಆದ್ದರಿಂದ ಹೇಗೆ ಹೆಸರೋ ಹಾಗೆ ಕೆಲಸ ಮಾಡಿ ತೋರಿಸುವಿರಿ. ಇಷ್ಟು ಭರವಸೆಯುಳ್ಳವರಾಗಿ ಇರುವಿರಲ್ಲವೇ? ದೊಡ್ಡವರು ದೊಡ್ಡವರೇ ಆದರೆ ಚಿಕ್ಕವರು ತಂದೆಯ ಸಮಾನ.... ಎಂದು ಹೇಳುತ್ತಾರಲ್ಲವೇ? ಈ ಗುಂಪು ಬಹಳ ಮುದ್ದಿನದಾಗಿದೆ. ಭರವಸೆಪೂರ್ಣರಾಗಿದ್ದಾರೆ. ಸಾಹಸದ ಕಾರಣದಿಂದಲೇ ಬಾಪ್ ದಾದಾ ಈ ಗುಂಪಿಗೆ ಶೂರ-ವೀರ ಗುಂಪು ಎಂದು ಹೆಸರಿಡುತ್ತಾರೆ. ಹೇಗೆ ಹೆಸರಿದೆಯೋ ಹಾಗೆ ಸದಾ ಪ್ರತಿಯೊಂದು ಕಾರ್ಯ ಶೂರವೀರರ ಸಮಾನ ಮಾಡಿ ತೋರಿಸಬೇಕು. ಎಂದೂ ಹೇಡಿಗಳಾಗಬಾರದು. ದುರ್ಬಲತೆಯನ್ನು ತೋರಿಸಬೇಡಿ, ಕಾಳಿಯ ಪೂಜೆಯನ್ನು ನೋಡಿರುವಿರಾ? ಈ ಗುಂಪು ಕಾಳಿಯ ದಳವಾಗಬೇಕು. ಒಬ್ಬೊಬ್ಬರು ಕಾಳಿ ರೂಪವಾದಾಗ ಸಮಸ್ಯೆಗಳನ್ನು ಎದುರಿಸುವಿರಿ. ವಿಶೇಷ ಕುಮಾರಿಯರು ಶೀತಲೆಯರಾಗಬಾರದು, ಕಾಳಿಯಾಗಬೇಕು. ಯಾವ ರೂಪದಲ್ಲಿ ಶೀತಲೆಯರಾಗಬೇಕು ಎಂಬುದರ ಅರ್ಥವನ್ನು ತಿಳಿದುಕೊಂಡಿದ್ದೀರಿ. ಆದರೆ ಸೇವೆಯಲ್ಲಿರುವಾಗ, ಕರ್ತವ್ಯದಲ್ಲಿರುವಾಗ ಕಾಳಿ ರೂಪವಾಗಬೇಕು. ಕಾಳಿ ರೂಪವಿದ್ದಾಗ ಯಾರಿಗೂ ಬಲಿಹಾರಿಯಾಗುವುದಿಲ್ಲ.

ಆದರೆ ಅನೇಕರು ಅವಳಿಗೆ ಬಲಿಹಾರಿಗಳಾಗುತ್ತಾರೆ. ತಾವು ಯಾರಿಗೂ ಬಲಿಹಾರಿಯಾಗುವುದಲ್ಲ ಆದರೆ ಯಾರಿಗೆ (ಶಿವ ಪರಮಾತ್ಮನಿಗೆ) ತಾವೆಲ್ಲ ಬಲಿಹಾರಿಯಾಗಿದ್ದೀರೋ ಅವರಿಗೆ ಬಲಿಹಾರಿ ಮಾಡಬೇಕು. ಈ ರೀತಿಯ ಕಾಳಿಯಾದರೆ ಅನೇಕರ ಸಮಸ್ಯೆಗಳಿಗೆ ಪರಿಹಾರವನ್ನು ಕೊಡುವಿರಿ. ಬಹಳ ಕಠಿಣ ರೂಪಬೇಕು. ಮಾಯೆಯ ಯಾವ ವಿಘ್ನವೂ ನಿಮ್ಮ ಎದುರಿಗೆ ಬರುವ ಸಾಹಸವನ್ನಿಡಬಾರದು. ಕುಮಾರಿಯರು ಕಾಳಿಯ ರೂಪವಾದಾಗ ಸೇವೆಯಲ್ಲಿ ಸಫಲತೆಯಾಗುವುದು. ಹಾಗಾದರೆ ಕಾಳಿಯ ಲಕ್ಷಣಗಳನ್ನು ಹೇಳಿ. ಸದಾ ಏಕರಸ ಸ್ಥಿತಿಯಲ್ಲಿರಿ ಮತ್ತು ವಿಘ್ನಗಳನ್ನು ದೂರಮಾಡಬೇಕು ಅದಕ್ಕಾಗಿ ಸದಾ ಎರಡು ಮಾತುಗಳನ್ನು ತಮ್ಮ ಮುಂದೆ ಇಟ್ಟುಕೊಳ್ಳಿ. ಒಂದು ಕಣ್ಣಲ್ಲಿ ಮುಕ್ತಿ ಮತ್ತು ಇನ್ನೊಂದು ಕಣ್ಣಲ್ಲಿ ಜೀವನ್ಮುಕ್ತಿ ಇಟ್ಟುಕೊಳ್ಳುವ ಹಾಗೆ, ಒಂದು ಕಡೆಗೆ ವಿನಾಶದ ನಗಾರಿ ಸಮ್ಮುಖದಲ್ಲಿಟ್ಟುಕೊಳ್ಳಿ ಮತ್ತೊಂದು ಕಡೆಗೆ ತಮ್ಮ ರಾಜ್ಯದ ದೃಶ್ಯಗಳನ್ನು ಎದುರಿಗೆ ಇಟ್ಟುಕೊಳ್ಳಿ ಎರಡನ್ನೂ ಜೊತೆಗೆ ಅರ್ಥಾಥ್ ವಿನಾಶವನ್ನು ಮತ್ತು ಸ್ಥಾಪನೆಯನ್ನೂ, ನಗಾರಿ ಮತ್ತು ದೃಶ್ಯಾವಳಿಯನ್ನು ಬುದ್ಧಿಯಲ್ಲಿ ಇಟ್ಟುಕೊಳ್ಳಿ. ಆಗ ಯಾವುದೇ ವಿಘ್ನವನ್ನೂ ಸಹಜವಾಗಿ ಪಾರು ಮಾಡುವಿರಿ.

ಯಾವ ಗುಂಪೂ ಮಾಡದಿರುವ ಕಾರ್ಯವನ್ನು ಈ ಗುಂಪು ಮಾಡಿ ತೋರಿಸಬೇಕು. ಅದ್ಭುತವನ್ನು ಮಾಡಿ ತೋರಿಸಬೇಕು. ಪರಸ್ಪರ ಸ್ನೇಹಿ ಮತ್ತು ಸಹಯೋಗಿಯಾಗಿರಬೇಕು ಆಗ ಸಫಲತೆಯ ನಕ್ಷತ್ರ ಎಲ್ಲರ ಮಸ್ತಕದಲ್ಲಿ ಹೊಳೆಯುತ್ತಿರುವುದು ಕಂಡು ಬರುವುದು. ಎಲ್ಲಿಯೂ ಸ್ನೇಹ ಮತ್ತು ಸಹಯೋಗ ಕಡಿಮೆಯಾಗಬಾರದು. ಸ್ನೇಹ ಮತ್ತು ಸಹಯೋಗ ಎರಡೂ ಜೊತೆಗೂಡಿದಾಗ ಶಕ್ತಿಯ ಪ್ರಾಪ್ತಿಯಾಗುತ್ತದೆ ಮತ್ತೆ ಅದರಿಂದ ಸಫಲತೆಯ ಪ್ರಾಪ್ತಿಯಾಗುತ್ತದೆ. ದೇವಿಯರು ಒಂದು ದೃಷ್ಟಿಯಿಂದ ಅಸುರರ ಸಂಹಾರ ಮಾಡುವರೆಂದು ತಮ್ಮ ಜಡ ಚಿತ್ರಗಳ ಗಾಯನವಿದೆ. ಅದೇ ರೀತಿ ಒಂದು ಕ್ಷಣದಲ್ಲಿ ಯಾವುದೇ ಅಸುರೀ ಸಂಸ್ಕಾರದ ಸಂಹಾರ ಮೂರ್ತಿಯಾಗಬೇಕು. ಆದ್ದರಿಂದ ಈ ಎರಡೂ ಮಾತುಗಳ ಕಡೆಗೆ ಗಮನವಿರಲಿ, ಈಗ ಈ ಮಾತನ್ನು ನೋಡಬೇಕು ಎಲ್ಲಿ ಸಂಹಾರ ಮಾಡಬೇಕಾಗಿದೆಯೋ ಅಲ್ಲಿ ರಚನೆ ಮಾಡಬಾರದು ಮತ್ತು ಎಲ್ಲಿ ರಚನೆ ಮಾಡಬೇಕಾಗಿದೆಯೋ ಅಲ್ಲಿ ಸಂಹಾರ ಮಾಡಬಾರದು. ಎಲ್ಲಿ ಮಾಸ್ಟರ್ ಬ್ರಹ್ಮ ಆಗಬೇಕೋ ಅಲ್ಲಿ ಮಾಸ್ಟರ್ ಶಂಕರ ಆಗಬಾರದು ಎಂಬ ಜ್ಞಾನ ಬುದ್ಧಿಯಲ್ಲಿ ಇರಬೇಕು. ಎಲ್ಲಿ ಮಾಸ್ಟರ್ ಬ್ರಹ್ಮ ಆಗುವುದು, ಎಲ್ಲಿ ಮಾಸ್ಟರ್ ಶಂಕರ ಆಗುವುದು, ರಚನೆ ಮಾಡುವುದರ ಬದಲು ವಿನಾಶ ಮಾಡಿದರೆ ಆಗಲೂ ತಪ್ಪು ಮತ್ತು ವಿನಾಶ ಮಾಡುವ ಬದಲು ರಚನೆ  ರಚಿಸಿದರೆ ಆಗಲೂ ತಪ್ಪಾಗುವುದು, ಶಂಖರನು ವಿರುದ್ಧ ರಚನೆಯನ್ನು ರಚಿಸಿದಾಗ ಚೇಳು, ಕಪ್ಪೆಗಳು ಹುಟ್ಟುತ್ತವೆ ಎಂಬ ಕಥೆಯನ್ನು ಕೇಳಿರುವಿರಲ್ಲವೇ? ಅದೇ ರೀತಿ ಸಂಹಾರದ ಬದಲು ಉಲ್ಟಾ ರಚನೆಯನ್ನು ಮಾಡಿದರೆ ವ್ಯರ್ಥ ಸಂಕಲ್ಪದ ಚೇಳು, ಕಪ್ಪೆಗಳು ಹುಟ್ಟುತ್ತವೆ. ಆದ್ದರಿಂದ ತಮ್ಮನ್ನು ಮತ್ತು ಇತರರನ್ನು ಕಚ್ಚುವಂತಹ ರಚನೆಯನ್ನು ರಚಿಸಬೇಡಿ. ಇಂತಹ ರಚನೆಯನ್ನು ರಚಿಸುವಾಗ ಎಚ್ಚರಿಕೆಯಿಂದ ಇರಬೇಕು. ಯಾವ ಸಮಯದಲ್ಲಿ ಯಾವ ಕರ್ತವ್ಯದ ಆವಶ್ಯಕತೆಯಿರುವುದೋ ಆ ಸಮಯ ಆ ಕರ್ತವ್ಯ ಮಾಡಬೇಕು. ಸಮಯ ಹೋದರೆ ಮತ್ತೆ ಸಂಪೂರ್ಣರಾಗುವುದಿಲ್ಲ. ಆದ್ದರಿಂದ ಈ ಗುಂಪಿಗೆ ಬಹಳ ಬೇಗನೇ ಒಪ್ಪಂದದ ನಂತರ ನಿಶ್ಚಿತಾರ್ಥವನ್ನು ಮಾಡಬೇಕು. ಸೇವಾಕೇಂದ್ರಗಳಲ್ಲಿ ಸೇವೆಯಲ್ಲಿ ತೊಡಗುವುದು ನಿಶ್ಚಿತಾರ್ಥವಾಗಿದೆ ನಂತರ ಸೇವೆಯಲ್ಲಿ ಪೂರ್ಣ ಸಫಲತೆಯಾದರೆ ಸಂಪೂರ್ಣ ಸಂಪನ್ನರಾಗುವ ಸಮಾರಂಭವಾಗಿದೆ. ಈ ಮೂರೂ ಸಮಾರಂಭಗಳನ್ನು ಬೇಗ ತೋರಿಸಬೇಕು. ಚಿಕ್ಕವರು ಹೆಚ್ಚು ಶೀಘ್ರವಾಗಿ ಹೋಗಬೇಕು. ಬಹಳ ಕಾಲದಿಂದ ಅಗಲಿದ, ಮುದ್ದು ಮಕ್ಕಳು ಚಿಕ್ಕವರಿರುತ್ತಾರೆ. ಆದ್ದರಿಂದ ಈ ಗುಂಪಿಗೆ ಪ್ರಾಕ್ಟಿಕಲ್ನಲ್ಲಿ ತೋರಿಸಬೇಕು. ಸಾಹಸವಿದೆಯಲ್ಲವೇ? ಸಾಹಸದ ಜೊತೆಗೆ ಉಲ್ಲಾಸವೂ ಇರಬೇಕು. ಎಂದಿಗೂ ಸೋಲಬಾರದು ಆದರೆ ತಮ್ಮನ್ನು ಹಾರದಲ್ಲಿ ಪೋಣಿಸಿಕೊಳ್ಳಬೇಕು. ಪೋಣಿಸಲ್ಪಟ್ಟರೆ ಎಂದೂ ಸೋಲುವುದಿಲ್ಲ. ಸೋಲುವ ಸಮಯ ಬಂದಾಗ ನಾವು ಸೋಲುವವರಲ್ಲ ಆದರೆ ಬಾಪ್ ದಾದಾರ ಕೊರಳ ಹಾರವಾಗಿದ್ದೇವೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಚಿಕ್ಕಚಿಕ್ಕ ಕೋಮಲ ಎಲೆಗಳನ್ನು ಪಕ್ಷಿಗಳು ಬಹಳ ತಿನ್ನುತ್ತವೆ ಏಕೆಂದರೆ ಕೋಮಲವಾಗಿರುವುದರಿಂದ ತಿನ್ನಲು ಮಜವಾಗಿರುತ್ತದೆ. ಆದ್ದರಿಂದ ಸಂಭಾಲನೆ ಮಾಡಿಕೊಳ್ಳಬೇಕು. **ತಮ್ಮನ್ನು ಒಬ್ಬರಿಗೆ ಅರ್ಪಣೆ ಮಾಡಿದ ಮೇಲೆ, ಬೇರೆ ಯಾರಿಗೂ ಸಂಕಲ್ಪದಿಂದಲೂ ಅರ್ಪಣೆಯಾಗಬಾರದು.** ಸಂಕಲ್ಪವೂ ಬಹಳ ಮೋಸ ಮಾಡುತ್ತದೆ. ಬಹಳ ಪ್ರಿಯರಾದ ಮಕ್ಕಳಿಗೆ ಏನು

ಮಾಡಲಾಗುತ್ತದೆ? ಕಪ್ಪು ಚುಕ್ಕೆಯನ್ನು( ಯಾರ ದೃಷ್ಟಿಯು ತಾಕದಂತೆ ಇಡುವ ದೃಷ್ಟಿ ಚುಕ್ಕೆ) ಇಡಲಾಗುತ್ತದೆ. ಆದ್ದರಿಂದ ಈ ಗುಂಪಿಗೂ ಯಾರ ದೃಷ್ಟಿಯಾಗದಂತೆ ಚುಕ್ಕೆಯನ್ನಿಡಬೇಕು, ತಿಲಕದ ಅರ್ಥವನ್ನು ತಿಳಿದಿರುವಿರಿ, ಹೇಗೆ ತಿಲಕವನ್ನು ಮಸ್ತಕದಲ್ಲಿ ಇಡಲಾಗುತ್ತದೆಯೋ ಹಾಗೆ ಈ ಎಲ್ಲಾ ಮಾತುಗಳಲ್ಲಿ ಸದಾ ಸ್ಥಿತರಾಗಿರಲು ಈ ತಿಲಕವಾಗಿದೆ. ಈ ಎಲ್ಲ ವಿಷಯಗಳ ಸ್ಥಿತಿಯಲ್ಲಿ ಸ್ಥಿತರಾದಾಗ ರಾಜ್ಯತಿಲಕ ಸಿಗುವುದು. ಯಾವ ಸ್ಥಿತಿಯಿರಬೇಕು? ಅದನ್ನು ತಿಳಿದಿರುವಿರಲ್ಲವೇ? ಈ ಗುಂಪಿಗೆ " **ಸಫಲತೆ ನಮ್ಮ ಜನ್ಮಸಿದ್ಧ ಅಧಿಕಾರವಾಗಿದೆ**." ಅಸಫಲತೆಯಲ್ಲ' ಎಂಬ ಸ್ಲೋಗನ್ ಕೊಡಲಾಗಿದೆ ಅದನ್ನು ನೆನಪಿಟ್ಟುಕೊಳ್ಳಬೇಕು. ಸಫಲತೆಯ ಶೃಂಗಾರವನ್ನೇ ಮಾಡಿಕೊಳ್ಳಬೇಕು. ಕಣ್ಣುಗಳಲ್ಲಿ, ಮುಖದಲ್ಲಿ, ಮಸ್ತಕದಲ್ಲಿ ಸಫಲತೆಯ ಸ್ವರೂಪ ಕಂಡುಬರಬೇಕು. ಸಂಕಲ್ಪವೂ ಸಫಲತೆಯದು ಮತ್ತು ಬೇರೆ ಯಾವ ಕಾರ್ಯವಿದ್ದರೂ ಅದರಲ್ಲಿ ಸಫಲತೆಯಿರಲಿ, ಸಫಲತೆಯೇ ಜನ್ಮಸಿದ್ಧ ಅಧಿಕಾರವಾಗಿರಲಿ, ಇದಾಗಿದೆ ಈ ಗುಂಪಿನ ಸ್ಲೋಗನ್. ಭಟ್ಟಿಯಲ್ಲಿರುವುದರಿಂದ ಎಲ್ಲವೂ ಬದಲಾಗುತ್ತದೆ. ಎಲ್ಲರಿಗಿಂತ ಚಿಕ್ಕವರು ಇನ್ನೂ ಹೆಚ್ಚು ಪ್ರತ್ಯಕ್ಷತೆ ಮಾಡುವರು, (ಪೂನಮ್ ಬಾಪದಾದಾರ ಮುಂದೆ ಕುಳಿತಿದ್ದಾರೆ). ಯಾರಲ್ಲಿ ಯಾರಿಗೂ ಭರವಸೆಯಿಲ್ಲವೋ ಅವರು ಇನ್ನೂ ಹೆಚ್ಚು ಭರವಸೆಯುಳ್ಳವರಾಗಿ ಕಂಡು ಬರುತ್ತಾರೆ. ಇವಳು ಅದ್ಭುತವನ್ನು ಮಾಡಿ ತೋರಿಸುವಳು. ಬಾಲ ಭವನದ ಇದೊಂದು ಸ್ಮೃತಿ ಚಿಹ್ನೆಯಾಗಿದೆ. ಸ್ಮೃತಿಚಿಹ್ನೆ ಯಾವಾಗಲೂ ಶೋಕೆಸ್ನಲ್ಲಿ ಇಡಲಾಗುತ್ತದೆ. ಆದ್ದರಿಂದ ತಮ್ಮನ್ನು ಯಾವಾಗಲೂ ಶೋಕೆಸ್ನಲ್ಲಿ ಇಟ್ಟುಕೊಳ್ಳಬೇಕು. ಚಿಕ್ಕವಳು ಅದ್ಭುತವನ್ನು ಮಾಡಬಹುದಾದರೆ ಇಡೀ ಗುಂಪು ಪ್ರಸಿದ್ಧವಾಗುವುದು.

ಈಗ ಹೇಳಿದ ಸ್ಲೋಗನನ್ನು ಮಾಡಿ ತೋರಿಸಬೇಕು. ಚಿಕ್ಕವರು ದೊಡ್ಡ ಕರ್ತವ್ಯವನ್ನು ಮಾಡಿ ತೋರಿಸಬೇಕು. ಇವರಿಂದ ಎಲ್ಲರ ಒಪ್ಪಂದವನ್ನು ಬರೆಸಬೇಕು ಯಾವುದೇ ವಿಘ್ನ ಬರಲಿ, ಯಾವುದೇ ಸಮಸ್ಯೆ ಬರಲಿ ಆದರೆ ಯಾರಿಗೂ ಬಲಿಹಾರಿಯಾಗುವುದಿಲ್ಲ. ಸತ್ಯವಾದ ಪಕ್ಕಾ ವಾಯಿದೆಯಾಗಿದೆಯಲ್ಲವೇ? ಹೇಗೆ ಬೀಜವನ್ನು ಬಿತ್ತಿದ ಮೇಲೆ ನೀರನ್ನು ಹಾಕಿದಾಗ ಅದು ವೃಕ್ಷದ ರೂಪದಲ್ಲಿ ಫಲೀಭೂತವಾಗುತ್ತದೆಯೋ ಹಾಗೆ ಯಾವ ಪ್ರತಿಜ್ಞೆಯನ್ನು ಮಾಡುತ್ತಿರುವಿರೋ ಅದಕ್ಕೆ ಯಾವ ನೀರನ್ನು ಹಾಕಬೇಕು. ಪ್ರತಿಜ್ಞೆಯನ್ನು ಪೂರ್ಣಮಾಡಲು ಸಂಗವೂ ಬೇಕು ಮತ್ತು ಜೊತೆಜೊತೆಗೆ ತಮ್ಮ ಸಾಹಸವೂ ಬೇಕು. ಸಂಗ ಮತ್ತು ಸಾಹಸ ಎರಡರ ಆಧಾರದಿಂದ ಪಾರಾಗುವಿರಿ. ಈ ರೀತಿಯ ಪಕ್ಕಾ ಮುದ್ರೆಯನ್ನು ಹಾಕಿಸಿಕೊಳ್ಳಬೇಕು ಪರಂಧಾಮದ ಮುಖಾಂತರ ಬೇರೆ ಎಲ್ಲಿಗೂ ಹೋಗದೆಯೇ ವೈಕುಂಠಕ್ಕೆ ಹೋಗಬೇಕು. ಹೇಗೆ ಸರಕಾರ ಮುದ್ರೆಯನ್ನು ಯಾರೂ ತೆಗೆಯಲಾರರೋ. ಅದೇ ರೀತಿ ಸರ್ವಶಕ್ತಿವಂತನ ಮುದ್ರೆಯನ್ನು ಎಲ್ಲರಿಗೂ ಹಾಕಬೇಕು. ಗುಂಪಿನಿಂದ ಯಾರೇ ದುರ್ಬಲರಾದರೂ ಎಲ್ಲರ ಪತ್ರಗಳೂ ಬರುವವು. ತಿಳಿಯಿತೇ? ಒಳ್ಳೆಯದು.

ಅವ್ಯಕ್ತ ಮುರಳಿ 28-05-1970.

***ಹೈಜಂಪ್ ಮಾಡಲು ಹಗುರರಾಗಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಜೀವನವನ್ನು ನಿರ್ಣಯಿಸುವ ಸಮಾರಂಭವನ್ನು ಮಾಡಿಕೊಂಡಿದ್ದೇನೆ.

2. ನಾನು ಸಾಹಸವನ್ನು ಮಾಡಿರುವ ಕಾರಣದಿಂದ ಬರುವ ಎಲ್ಲಾ ವಿಷಯಗಳನ್ನು ಧೈರ್ಯದಿಂದ ಎದುರಿಸಿದ್ದೇನೆ.

3. ನಾನು ಎಂತಹ ಪರೀಕ್ಷೆ ಬಂದಾಗಲೂ ಆಂತರಿಕವಾಗಿ, ಬಾಹ್ಯವಾಗಿ ಹಗುರತೆಯನ್ನು ಅನುಭವ ಮಾಡಿಕೊಂಡು, ಹೈಜಂಪ್ ಮಾಡಿ ಪರೀಕ್ಷೆಯನ್ನು ದಾಟಿದ್ದೇನೆ.

4. ನಾನು ಎಲ್ಲರನ್ನೂ ಶಿವ ತಂದೆಗೆ ಬಲಿ ಮಾಡುವ ಮತ್ತು ಸಮಸ್ಯೆಗಳನ್ನು ಪರಿಷ್ಕರಿಸುವ ಕಾಳಿಕಾ ಸ್ವರೂಪ.

5. ನಾನು 'ಸ್ಥಾಪನೆ (ರಾಜ್ಯದ ದೃಶ್ಯಗಳು) ಮತ್ತು ವಿನಾಶ (ನಗಾರಿ)' ಈ ಎರಡನ್ನೂ ಬುದ್ಧಿಯಲ್ಲಿಟ್ಟು ಯಾವ ವಿಘ್ನವನ್ನಾದರೂ ಸಹಜವಾಗಿ ದಾಟಿ ಅದ್ಭುತ ಮಾಡಿ ತೋರಿಸಿದ್ದೇನೆ.

6. ನಾನು ನನ್ನ ಮಸ್ತಕದಲ್ಲಿ ಸಫಲತೆಯ ನಕ್ಷತ್ರ, ಹೊಳೆಯುತ್ತಿರುವ ಸ್ನೇಹಿ & ಸಹಯೋಗಿ.

7. ನಾನು ಎಲ್ಲಿ ರಚನೆಯನ್ನು ರಚಿಸಬೇಕು ಅಲ್ಲಿ ಮಾಸ್ಟರ್ ಬ್ರಹ್ಮನಾಗಿ, ಎಲ್ಲಿ ವಿನಾಶವನ್ನು ಮಾಡಬೇಕು ಅಲ್ಲಿ ಮಾಸ್ಟರ್ ಶಂಕರನಾಗಿ ಕರ್ತವ್ಯವನ್ನು ನಿರ್ವಹಿಸಿರುವ ಸಂಪೂರ್ಣ ಸ್ವರೂಪ.

8. ನಾನು ಶಿವ ತಂದೆಯ ಕೊರಳಿನ ಹಾರ.

9. ನಾನು ತಂದೆಗೆ ಅರ್ಪಣೆಯಾಗಿ ಯಾರ ದೃಷ್ಟಿಯೂ ಆಗದಂತೆ ತಿಲಕವನ್ನು ಇಡಿಸಿಕೊಂಡಿರುವ ಸಫಲತಾ ಮೂರ್ತಿ.

10. ಸಫಲತೆ ನನ್ನ ಜನ್ಮ ಸಿದ್ಧ ಅಧಿಕಾರ